**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3**

ಸಂ.ಎ8. ಎಸ್.ಎಸ್.ಎಲ್.ಸಿ. ಅಧಿಸೂಚನೆ ಮಾರ್ಚ್-2011/10-11 ದಿನಾಂಕ: 01-06-2010

# ಅಧಿಸೂಚನೆ

ವಿಷಯ: 2011ನೇ ಮಾರ್ಚ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ರಾಜ್ಯದ ಶಾಲಾ/ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

===

2011ನೇ ಮಾರ್ಚ್ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಂದ ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ/ಅನುದಾನ ರಹಿತ ಶಾಲಾ/ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಶಾಲಾ/ಕಾಲೇಜುಗಳ ಮುಖಾಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು/ಖಾಸಗಿ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳು ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ.

1. **ಶಾಲಾ ಅಭ್ಯರ್ಥಿಗಳು**: ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಕಾಲೇಜುಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಹತ್ತನೇ ತರಗತಿಗೆ ಅಗತ್ಯವಾದ ವಿದ್ಯಾಭ್ಯಾಸವನ್ನು ಪೂರೈಸಿರುವ ವಿದ್ಯಾರ್ಥಿಗಳನ್ನು ಶಾಲಾ ಆಭ್ಯರ್ಥಿಗಳೆಂದು ಪರಿಗಣಿಸಿದೆ. ಈ ವರ್ಗದ ಸಂಕೇತ ಆರ್.ಎಫ್ ಎಂದು ಗುರ್ತಿಸಿದೆ.

2. **ಖಾಸಗಿ ಅಭ್ಯರ್ಥಿಗಳು:** ಮಾನ್ಯತೆ ಪಡೆದ ಮತ್ತು ಶಾಲಾ ಸಂಕೇತ ಪಡೆದ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡದಿರುವ/ಅರ್ಧ ದಲ್ಲಿಯೇ ವ್ಯಾಸಂಗ ಮೊಟಕುಗೊಳಿಸಿರುವ ಅಥವಾ ದಿನಾಂಕ: 01-06-2011ಕ್ಕೆ 15 ವರ್ಷಗಳ ವಯೋಮಾನ ಪೂರ್ಣಗೊಳಿಸಿ ನೇರವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅಪೇಕ್ಷಿಸುವವರನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುತ್ತದೆ. ಇವರುಗಳು ತಮ್ಮ ಹೆಸರು ಮತ್ತು ಇತರೆ ವಿವರಗಳನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರವರ ಕಚೇರಿಯಲ್ಲಿ ನೋಂದಣಿ ಶುಲ್ಕ ರೂ 180+5=185.00 ಪಾವತಿಸಿ ನೋಂದಾಯಿಸಿಕೊಳ್ಳಬೇಕು. ಈ ಹಿಂದಿನ ವರ್ಷಗಳಲ್ಲಿ ಉಪ ನಿರ್ದೇಶಕರ ಕಚೇರಿಯಲ್ಲಿ ನಿಗಿದಿತ ನೋಂದಣಿ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿಕೊಂಡಿದ್ದರೆ ಈ ಸಾಲಿಗೆ ರೂ. 50-00ಅನ್ನು ಪಾವತಿಸಿ ನವೀಕರಿಸಿಕೊಂಡು ಪರೀಕ್ಷೆಗೆ ಹಾಜರಾಗಬಹುದು. ಈ ವರ್ಗದ ಸಂಕೇತ ಪಿ.ಎಫ್ ಎಂದು ಗುರ್ತಿಸಿದೆ. ಖಾಸಗಿ ಅಭ್ಯರ್ಥಿಗಳು ನೋಂದಾಯಿಸಕೊಳ್ಳಲು ಕೊನೆಯ ದಿನಾಂಕ:18-08-2010

**3. ಪುನರಾವರ್ತಿತ ಅಭ್ಯರ್ಥಿಗಳು:** ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕುಳಿತು ಅನುತ್ತೀರ್ಣರಾಗಿ ಪುನ: ಪರೀಕ್ಷೆ ಬರೆಯಲು ಬಯಸಿರುವ ವಿದ್ಯಾರ್ಥಿಗಳು. ಈ ವರ್ಗದ ಸಂಕೇತ ಆರ್.ಆರ್. ಎಂದು ಗುರ್ತಿಸಿದೆ.

**4. ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು:** ಖಾಸಗಿ ವಿದ್ಯಾರ್ಥಿಗಳಾಗಿ ನೋಂದಾವಣೆ ಮಾಡಿಕೊಂಡು ಪರೀಕ್ಷೆಯಲ್ಲಿ ಕುಳಿತು ಅನುತ್ತೀರ್ಣರಾಗಿ ಪುನ: ಪರೀಕ್ಷೆ ಬರೆಯಲು ಬಯಸಿರುವ ವಿದ್ಯಾರ್ಥಿಗಳು. ಈ ವರ್ಗದ ಸಂಕೇತ ಪಿ.ಆರ್. ಎಂದು ಗುರ್ತಿಸಿದೆ.

**5. ಅರ್ಜಿಗಳ ಸ್ವರೂಪ:** ಓ.ಎಂ.ಆರ್(ಆಪ್ಟಿಕಲ್ ಮಾರ್ಕ್ ರೀಡರ್) ನಮೂನೆಗಳ ಮುಖೇನ ಅರ್ಜಿಗಳನ್ನು ಸ್ವೀಕರಿಸುವ ಕಾರ್ಯ ಜಾರಿಗೆ ತರಲಾಗಿದೆ. ಶಾಲಾ/ಕಾಲೇಜುಗಳಿಂದ ಭರ್ತಿ ಮಾಡಿದ ಓ.ಎಂ.ಆರ್ ನಮೂನೆಗಳನ್ನು ನೇರವಾಗಿ ಕಂಪ್ಯೂಟರ್ ಸ್ಕ್ಯಾನ್ ಮಾಡಲಾಗುತ್ತದೆ. ಆದ್ದರಿಂದ ಶಾಲಾ ಹಂತದಲ್ಲಿ ಅರ್ಜಿಗಳನ್ನು ನಿಖರವಾಗಿ ಭರ್ತಿ ಮಾಡಬೇಕು. ಪೂರಕವಾಗಿ ಶೇಡ್ ಮಾಡಿರಬೇಕು.

- **ಶಾಲಾ ಅಭ್ಯರ್ಥಿಗಳು ಹಾಗೂ ಹೊಸದಾಗಿ ನೋಂದಾಯಿಸಲ್ಪಡುವ ಖಾಸಗಿ ವಿದ್ಯಾರ್ಥಿಗಳಿಗೆ ಓ.ಎಂ.ಆರ್ ಅರ್ಜಿಗಳನ್ನು ಬಳಸಬೇಕು.**

ಪರೀಕ್ಷಾ ಶುಲ್ಕ/ನೋಂದಣಿ ಶುಲ್ಕ ಪಾವತಿಸಿದ ಅನುಬಂಧ-1 ಮತ್ತು 2ರಲ್ಲಿ ನಮೂದಿಸಿದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲಾವಾರು ಓ.ಎಂ.ಆರ್ ಅರ್ಜಿಗಳನ್ನು ಮಂಡಳಿಯಿಂದ ಶಾಲೆಗಳಿಗೆ ಕಳುಹಿಸಿಕೊಡಲಾಗುವುದು. ಯಾವುದೇ ಸಂದರ್ಭದಲ್ಲೂ ಅನುಬಂಧ-1 & 2ರಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಶುಲ್ಕ ಪಾವತಿಸದೇ ಇದ್ದಲ್ಲಿ ಓ.ಎಂ.ಆರ್ ಅರ್ಜಿಗಳನ್ನು ಮಂಡಳಿಯಿಂದ ಕಳುಹಿಸಲಾಗುವುದಿಲ್ಲ.

**6. ಪರೀಕ್ಷಾ ಶುಲ್ಕ:** ಸರ್ಕಾರದ ಆದೇಶದ ಸಂಖ್ಯೆ ಇಡಿ 06 ಎಸ್ ಎಕ್ಸ್ ಎಂ 2006,ಬೆಂಗಳೂರು ದಿನಾಂಕ: 04-05-2006ರನ್ವಯ ಮಾರ್ಚ್-2011ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿಧಿಸಿದ ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳು<br>ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳು | ಪರೀಕ್ಷಾ ಶುಲ್ಕ ರೂ. 275/- + 20/-(ಲ್ಯಾಮಿನೇಷನ್ ಶುಲ್ಕ) (ಪ್ರತಿ ವಿದ್ಯಾರ್ಥಿಗೆ) |
| 2 | ಪುನರಾವರ್ತಿತ ಅಭ್ಯರ್ಥಿಗಳು:<br>1. ಒಂದು ವಿಷಯಕ್ಕೆ<br>2. ಎರಡು ವಿಷಯಕ್ಕೆ<br>3. ಮೂರು ವಿಷಯ ಹಾಗೂ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ | ಪ್ರತಿ ವಿದ್ಯಾರ್ಥಿಗೆ<br>ರೂ. 150/-<br>ರೂ. 200/-<br>ರೂ. 300/- |
| 3 | ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ | ರೂ. 180/- +<br>ರೂ. 5-00 ಅರ್ಜಿ ಶುಲ್ಕ<br>(ಪ್ರತಿ ವಿದ್ಯಾರ್ಥಿಗೆ) |
| 4 | ಖಾಸಗಿ ಅಭ್ಯರ್ಥಿಗಳ ನೋಂದಣಿ ನವೀಕರಣ ಶುಲ್ಕ | ರೂ. 50/- ಪ್ರತಿ ವಿದ್ಯಾರ್ಥಿಗೆ |

- ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕ ರೂ. 20/-(ಇಪ್ಪತ್ತು ರೂ.ಗಳು ಮಾತ್ರ) ಗಳನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿ ಪಾವತಿಸಬೇಕು. ಯಾವುದೇ ವಿದ್ಯಾರ್ಥಿಗೂ ಲ್ಯಾಮಿನೇಷನ್ ಶುಲ್ಕ ಪಾವತಿಗೆ ವಿನಾಯಿತಿ ಇರುವುದಿಲ್ಲ.
- ಪುನರಾವರ್ತಿತ ವಿದ್ಯಾರ್ಥಿಗಳು ಪುನ: ಲ್ಯಾಮಿನೇಷನ್ ಶುಲ್ಕ ಪಾವತಿಸುವ ಅಗತ್ಯವಿಲ್ಲ.

## 7. ಪರೀಕ್ಷಾ ಶುಲ್ಕ ವಿನಾಯಿತಿ:

- ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.
- ಸರ್ಕಾರಿ ಪ್ರೌಢ ಶಾಲೆ/ಪದವಿ ಪೂರ್ವ ಕಾಲೇಜುಗಳಲ್ಲಿ ಶಾಲಾ ಅಭ್ಯರ್ಥಿಗಳಾಗಿ ಪ್ರಥಮ ಬಾರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಹೆಣ್ಣುಮಕ್ಕಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.(ಸರ್ಕಾರಿ ಆದೇಶದ ಸಂಖ್ಯೆ. ಇಡಿ 119 ಯೋಯೋಕಾ ದಿನಾಂಕ: 16-07-2001ರನ್ವಯ)
- ಕಿವುಡ/ಮೂಗ/ಅಂಧತ್ವ ಹಾಗೂ ಅರ್ಬುದ ರೋಗಗಳಿಂದ ನರಳುತ್ತಿರುವ ಶಾಲಾ ಅಭ್ಯರ್ಥಿ/ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಜಿಲ್ಲಾ ಆರೋಗ್ಯಾಧಿಕಾರಿಗಳ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು.( ಸರ್ಕಾರಿ ಆದೇಶದ ಸಂಖ್ಯೆ. ಇಡಿ 98 ಎಸ್.ಎಕ್ಸ್.ಎಂ. 98 ದಿನಾಂಕ: 20-01-1997)

**ಎಲ್ಲಾ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕವನ್ನು ಒಟ್ಟಿಗೆ ಸೇರಿಸಿ, ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಇಲ್ಲಿಗೆ ಪಾವತಿಯಾಗುವಂತೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖರೀದಿಸಿದ ಬ್ಯಾಂಕ್ ಹುಂಡಿಗಳ ಮುಖೇನ ಮಂಡಳಿಗೆ ಪಾವತಿಸತಕ್ಕದ್ದು.**

**ಮಾರ್ಚಿ-2011ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿರುವ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ನೋಂದಣಿ ಶುಲ್ಕಗಳನ್ನು ಜಿಲ್ಲಾ ಉಪ ನಿರ್ದೇಶಕರು ಕ್ರೋಢೀಕರಿಸಿ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಇವರ ಹೆಸರಿಗೆ ಖರೀದಿಸಿದ ಒಂದು ಬ್ಯಾಂಕ್ ಹುಂಡಿಯೊಂದಿಗೆ ಅನುಬಂಧ-6ರ ನಮೂನೆಯಲ್ಲಿ ವಿದ್ಯಾರ್ಥಿಗಳ ವಿವರಗಳೊಂದಿಗೆ ಮಂಡಳಿಗೆ ದಿನಾಂಕ: 28-08-2010ರೊಳಗಾಗಿ ಸಲ್ಲಿಸತಕ್ಕದ್ದು.**

**ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕಗಳನ್ನು ಜಿಲ್ಲಾ ಉಪ ನಿರ್ದೇಶಕರು ಕ್ರೋಢೀಕರಿಸಿ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಇವರ ಹೆಸರಿಗೆ ಖರೀದಿಸಿದ ಒಂದು ಬ್ಯಾಂಕ್ ಹುಂಡಿಯೊಂದಿಗೆ ಅನುಬಂಧ-7ರ ನಮೂನೆಯಲ್ಲಿ ವಿದ್ಯಾರ್ಥಿಗಳ ವಿವರಗಳೊಂದಿಗೆ ಮಂಡಳಿಗೆ ದಿನಾಂಕ: 28-08-2010ರೊಳಗಾಗಿ ಸಲ್ಲಿಸತಕ್ಕದ್ದು.**

## 8. ಬ್ಯಾಂಕ್ ಹುಂಡಿ ಹಾಗೂ ಅರ್ಜಿಗಳನ್ನು ಸಲ್ಲಿಸುವಲ್ಲಿ ನಿಗದಿಪಡಿಸಿರುವ ದಿನಾಂಕಗಳ ವಿವರ.

1. ಪರೀಕ್ಷಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆಯ ದಿನಾಂಕ: **21-08-2010**

2. ಪರೀಕ್ಷಾ ಶುಲ್ಕದ ಹುಂಡಿ ಪಡೆಯಲು ಕೊನೆಯ ದಿನಾಂಕ: **23-08-2010**
3. ಅರ್ಜಿ ಹಾಗೂ ಹುಂಡಿಯನ್ನು ಮಂಡಳಿಗೆ ತಲುಪಿಸಲು ಕೊನೆಯ ದಿನಾಂಕ: **28-08-2010**
4. ಓ.ಎಂ.ಆರ್ ಫಾರಂಗಳನ್ನು ಶಾಲೆಗಳಿಗೆ ಮಂಡಳಿಯು ಕಳುಹಿಸಲು ನಿಗದಿಪಡಿಸಿದ ದಿನಾಂಕ: **03-09-2010.**

ಯಾವುದೇ ಸಂದರ್ಭದಲ್ಲಿಯೂ ಸಹ ನಿಗದಿತ ದಿನಾಂಕಕ್ಕೆ ಶುಲ್ಕ ಸಲ್ಲಿಸದೇ ಇರುವ ಶಾಲೆಗಳ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಅಂಥಹ ಅರ್ಜಿಗಳನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಲಾಗುವುದು.

5. ಭರ್ತಿಮಾಡಿದ ಓ.ಎಂ.ಆರ್ ಫಾರಂಗಳನ್ನು ಮಂಡಳಿಗೆ **(ಕೇಂದ್ರ ಕಚೇರಿಗೆ)** ಕಳುಹಿಸಲು ನಿಗದಿಪಡಿಸಿದ ದಿನಾಂಕ: 18-09-2010.

9. **ಪರೀಕ್ಷಾ ಅರ್ಜಿಗಳ ಸಂಕೇತ ಮತ್ತು ನಮೂನೆಗಳ ವರ್ಗೀಕರಣ**;

| ಕ್ರಮ ಸಂ. | ವಿದ್ಯಾರ್ಥಿಗಳ ವರ್ಗೀಕರಣ | ಸಂಕೇತ | ಅರ್ಜಿ ನಮೂನೆಯ ಸ್ವರೂಪ | ಷರಾ |
|---|---|---|---|---|
| 1 | ಶಾಲಾ ಅಭ್ಯರ್ಥಿಗಳು | ಆರ್.ಎಫ್ | ಓ.ಎಂ.ಆರ್ | ಅನುಬಂಧ 1ರಲ್ಲಿ ಭರ್ತಿ ಮಾಡುವುದು |
| 2 | ಖಾಸಗಿ ಅಭ್ಯರ್ಥಿಗಳು | ಪಿ.ಎಫ್ | ಓ.ಎಂ.ಆರ್ ಪಿ.ಎಫ್ | ಅನುಬಂಧ 2ರಲ್ಲಿ ಭರ್ತಿ ಮಾಡುವುದು |
| 3 | ಪುನರಾವರ್ತಿತ ಅಭ್ಯರ್ಥಿಗಳು | ಆರ್.ಆರ್ | ಎಂ.ಎಸ್.ಎ | ಅನುಬಂಧ 3ರಲ್ಲಿ ಭರ್ತಿ ಮಾಡುವುದು |
| 4 | ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು | ಪಿ.ಆರ್ | ಎಂ.ಎಸ್.ಎ | ಅನುಬಂಧ 4ರಲ್ಲಿ ಭರ್ತಿ ಮಾಡುವುದು |
| 5 | ಶುಲ್ಕದ ವಿವರಗಳು | -- | -- | ಅನುಬಂಧ-5ರಲ್ಲಿ ಭರ್ತಿ ಮಾಡುವುದು. |
| 6 | ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿ | -- | -- | ಅನುಬಂಧ-6ರಲ್ಲಿ ಭರ್ತಿ ಮಾಡುವುದು. |
| 7 | ಖಾಸಗಿ ಅಭ್ಯರ್ಥಿಗಳ ನೋಂದಣಿ ಮಾಹಿತಿ | -- | -- | ಅನುಬಂಧ-7ರಲ್ಲಿ ಭರ್ತಿ ಮಾಡುವುದು. |

**10. ಶಾಲಾ ಸಂಕೇತ:** ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸುವ ಮುನ್ನ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯ. ಶಾಲಾ ಸಂಕೇತವಿಲ್ಲದೆ ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ.

- ಕೆಲವು ಶಾಲೆಗಳಲ್ಲಿ 10ನೇ ತರಗತಿ ಪ್ರಾರಂಭವಾಗಿ ಸುಮಾರು 5ರಿಂದ 6 ವರ್ಷಗಳಾದರೂ ಮಂಡಳಿಯಿಂದ ಶಾಲಾ ಸಂಕೇತ ಪಡೆಯದೆ ಅರ್ಜಿಗಳನ್ನು ಸಲ್ಲಿಸುತ್ತಿರುವುದು ಮಂಡಳಿ ಗಮನಿಸಿದೆ.
- ಮಂಡಳಿಯ ಪೂರ್ವಾನುಮತಿ ಪಡೆಯದೇ ಕೆಲವು ಶಾಲೆಗಳು ಇತರೆ ಶಾಲೆಗಳ ವಿದ್ಯಾರ್ಥಿಗಳ ಅರ್ಜಿಗಳನ್ನೂ ಸಹ ಸಲ್ಲಿಸುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯ ಪ್ರಸ್ತಾವನೆಗಳನ್ನು

ಸಲ್ಲಿಸಬಾರದೆಂದು ಸ್ಪಷ್ಟಪಡಿಸಿದೆ. ಇದು ಪುನರಾವರ್ತನೆಯಾದಲ್ಲಿ ಶಾಲಾ/ಕಾಲೇಜುಗಳ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮದ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಆದ್ದರಿಂದ ಶಾಲಾ ಸಂಕೇತವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಇದಕ್ಕೆ ಯಾವುದೇ ರಿಯಾಯಿತಿ ಇರುವುದಿಲ್ಲ.

- ಶಾಲಾ ಸಂಕೇತ ಪಡೆಯದ ಸಂಸ್ಥೆಯನ್ನು ಮಾನ್ಯ ಮಾಡುವುದಿಲ್ಲ. ಈ ಶಾಲೆಗಳು ಮಾನ್ಯತೆ ಪಡೆಯದೇ ಇದ್ದಲ್ಲಿ ಹಾಗೂ ನಂತರ ಮಂಡಳಿಯಿಂದ ಶಾಲಾ ಸಂಕೇತ ಸಂಖ್ಯೆಯನ್ನು ಪಡೆಯದಿದ್ದಲ್ಲಿ, ಇಂತಹ ಶಾಲೆಗಳಿಂದ ಬರುವ ವಿದ್ಯಾರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು ಹಾಗೂ ಖಾಸಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನು ಪಾಲಿಸಬೇಕಾಗುತ್ತದೆ.

11 **<u>ಭಾಷಾ ವಿನಾಯಿತಿ:</u>**

1. ಸರ್ಕಾರದ ಆದೇಶದ ಸಂಖ್ಯೆ. ಮಮಅ 65 ಪಿಹೆಚ್‌ಪಿ 2000, ಬೆಂಗಳೂರು ದಿನಾಂಕ: 10–03–2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡಿತ್ತಿರುವ ಸ್ಪ್ಯಾಸ್ಟಿಕ್/ಕಿವುಡು/ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ಇರುತ್ತದೆ.

2. ಅಂಧ ವಿದ್ಯಾರ್ಥಿಗಳು ಹಾಗೂ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನ ವಿಷಯಗಳ ಬದಲು ಈ ಕೆಳಕಂಡ ಯಾವುದಾದರೂ ಎರಡು ವಿಷಯಗಳನ್ನು ತೆಗೆದುಕೊಳ್ಳಬಹುದು.

| ಕ್ರಮ ಸಂಖ್ಯೆ | ವಿಷಯಗಳು | ಪ್ರಶ್ನೆಪತ್ರಿಕೆಗಳ ಸಂಕೇತ ಸಂಖ್ಯೆ |
|---|---|---|
| 1 | **<u>ಎ ಗುಂಪು</u>**<br>1. ಭಾರತೀಯ ಸಮಾಜ ಶಾಸ್ತ್ರ<br>2. ಭಾರತೀಯ ಅರ್ಥಶಾಸ್ತ್ರ<br>3. ಭಾರತೀಯ ರಾಜ್ಯ ಶಾಸ್ತ್ರ ಮತ್ತು ಪೌರನೀತಿ | 91<br>92<br>93 |
| 2 | **<u>ಬಿ.ಗುಂಪು</u>**<br>1.ಭಾರತೀಯ ರಾಜ್ಯ ಶಾಸ್ತ್ರ ಮತ್ತು ಪೌರನೀತಿ<br>**<u>ಸಂಗೀತ</u>**:<br>• ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿ ಸಂಗೀತ<br>• ಕೈಕೆಲಸ/ಬಿದಿರು ಮತ್ತು ಪ್ಲಾಸ್ಟಿಕ್ ಹೆಣೆಯುವ ಕೆಲಸ | 93<br>94 |

(ಸರ್ಕಾರಿ ಆದೇಶ ಸಂಖ್ಯೆ. ಇಡಿ:56 ಎಸ್.ಎಕ್ಸ್ ಎಂ.78 ದಿನಾಂಕ: 17–03–1979 ಮತ್ತು ಇಡಿ 142.ಯೋಯೋಕಾ 2009 ದಿನಾಂಕ: 16–07–2009)

ಕಲಿಕಾ ನ್ಯೂನತೆ / ದೃಷ್ಟಿ ಇಲ್ಲದ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನದ ಬದಲು ಬದಲಿ ವಿಷಯಗಳನ್ನು ತೆಗೆದುಕೊಳ್ಳಲು ಇಚ್ಛಿಸಿದಲ್ಲಿ ಅರ್ಜಿಗಳನ್ನು ತುಂಬುವಾಗ ತಪ್ಪದೆ ಸೂಚಿಸಿರುವ ಸ್ಥಳದಲ್ಲಿ ವಿಷಯ ಸಂಖ್ಯೆ 81ರ ಬದಲು 91,92 ಮತ್ತು 83ರ ಬದಲು,92,93 ಎಂದು ನಮೂದಿಸಲೂ ಸಹ ತಿಳಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ. 142. ಯೋಯೋಕ:2009 ದಿನಾಂಕ: 16–07–2009ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು **ನಿಮ್ಹಾನ್ಸ್ / ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು / ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನ: ಶಾಸ್ತ್ರಜ್ಞರು / ಕನಿಷ್ಠ ಎಂ.ಫಿಲ್ ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನ:ಶಾಸ್ತಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ ಡಿಸ್ ಲೆಕ್ಸಿಯಾ ಅಸೋಷಿಯೇಷನ್ (ರಿ) ಬೆಂಗಳೂರು** ರವರಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ.

ಅಂಗವಿಕಲ ಮತ್ತು ದೃಷ್ಟಿ ಇಲ್ಲದ ವಿದ್ಯಾರ್ಥಿಗಳು ಬರಹಗಾರರ ಸಹಾಯಕ್ಕಾಗಿ ಕೋರಿಕೆ ಸಲ್ಲಿಸಬಹುದು. ಈ ಕೋರಿಕೆಗೆ ಜಿಲ್ಲಾ ವೈದ್ಯರು (ಡಿಸ್ಟ್ರಿಕ್ ಸರ್ಜನ್ ಹುದ್ದೆಗೆ ಕಡಿಮೆ ಇಲ್ಲದ ವೈದ್ಯಕೀಯ ಅಧಿಕಾರಿಗಳು) ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು. ಬರಹಗಾರರ ನೇಮಕಾತಿಯ ಅನುಮೋದನೆಯನ್ನು ಸಂಬಂಧಿಸಿದ ಪರೀಕ್ಷೆಗೆ ಮುಂಚೆಯೇ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆದುಕೊಳ್ಳಬೇಕು. ಈ ಬರಹಗಾರರ ವಿದ್ಯಾರ್ಹತೆಯು 10ನೇ ತರಗತಿಗಿಂತ ಕಡಿಮೆ ಇರತಕ್ಕದ್ದು.

ಯಾವುದಾದರೂ ಒಂದು ಅಥವಾ ಹೆಚ್ಚಿನ ಅಂಗವಿಕಲತೆಯ ತೊಂದರೆಯಿಂದ ನರಳುತ್ತಿರುವ ಹಾಗೂ ದೃಷ್ಟಿ ಹಾಗೂ ಶ್ರವಣ ವೈಕಲ್ಯತೆ ಇರುವ ಅಭ್ಯರ್ಥಿಗಳಿಗೆ ಮತ್ತು ಬರಹಗಾರರ ಸೌಲಭ್ಯ ಪಡೆಯುವ ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯ ನೀಡುವ ಅವಕಾಶವಿರುತ್ತದೆ. ಅಂಗವಿಕಲತೆ ಎಂದರೆ,

ಅ) ಮೆದುಳಿನ ಪಾರ್ಶ್ವವಾಯು
ಆ) ಬಲ ತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು.
ಇ) ಮಾತು ಅಸ್ಪಷ್ಟ ಮತ್ತು ಅಂಗಾಂಗ ನ್ಯೂನತೆ ಇರುವವರು.
ಈ) ಯಾವಾಗಲೂ ಬಲಗೈಲಿ ಬರೆಯುತ್ತಿದ್ದು, ಪರೀಕ್ಷೆ ಸಮಯದಲ್ಲಿ ಬಲಗೈಗೆ ತೊಂದರೆಯಾಗಿ ಎಡಗೈಲಿ ಬರೆಯುವುದರಿಂದ ಅಥವಾ ಯಾವಾಗಲೂ ಎಡಗೈಲಿ ಬರೆಯುವ್ಯದರಿಂದ ನಿಧಾನವಾಗುವ ಸಂದರ್ಭಗಳಲ್ಲಿ,

1) 2.30 ಹಾಗೂ 3 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ ಒಂದು ಗಂಟೆ
2) 2 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ 45 ನಿಮಿಷಗಳು
3) 1 ಗಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ 30 ನಿಮಿಷಗಳು

ಮೇಲ್ಕಂಡಂತೆ ಬರಹಗಾರರ ಸೌಲಭ್ಯ ಹಾಗೂ ಹೆಚ್ಚಿನ ಕಾಲಾವಕಾಶ ಪಡೆಯುವ ಬಗ್ಗೆ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆದುಕೊಳ್ಳಬೇಕು.

- ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 142 ಯೋಯೋಕಾ 2008, ದಿ: 21.02.2009ರ ಅನ್ವಯ, ರಾಜ್ಯದಲ್ಲಿ ಮಾನ್ಯತೆ ಪಡೆದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈ ಕೆಳಕಂಡ ಸೌಲಭ್ಯವನ್ನು ಒದಗಿಸಲಾಗಿದೆ.

1. ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಲು ಅನುಮತಿಸಲಾಗಿದೆ.
2. ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

12. **ಭಾಷಾ ಸಂಯೋಜನೆ:**

1. ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳ ಸಂಯೋಜನೆ ಬಗ್ಗೆ ಪರಿಪೂರ್ಣ ವಿವರಣೆಗಳನ್ನು 1999-2000 ರಿಂದ ಜಾರಿಗೊಂಡ ಪರಿಷ್ಕೃತ ಪಠ್ಯವಸ್ತುವಿನಲ್ಲಿ ವಿವರಿಸಲಾಗಿದೆ. ಆ ಕೋಷ್ಠಕದಂತೆ ಭಾಷಾ ಸಂಯೋಜನೆಯನ್ನು ರಾಜ್ಯದ ಭಾಷಾ ನೀತಿಯಂತೆ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ಇದಕ್ಕೆ ಯಾವುದೇ ವಿನಾಯಿತಿ ನೀಡುವ ಪ್ರಶ್ನೆ ಬರುವುದಿಲ್ಲ. **(ಭಾಷಾ ಸಂಯೋಜನೆ ವಿರಗಳನ್ನು ಅನುಬಂಧ-ಅ ನಲ್ಲಿ ವಿವರಿಸಲಾಗಿದೆ.)**

2. ಆಲ್ಟರ್‌ನೇಟ್ ಇಂಗ್ಲೀಷ್‌ಗೆ ಅನುಮತಿ ನೀಡುವ ಕ್ರಮವು 2009ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಿಂದ ಅಂತ್ಯಗೊಂಡಿರುತ್ತದೆ. ಮಾರ್ಚ್-2010ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆಲ್ಟರ್‌ನೇಟ್ ಇಂಗ್ಲೀಷ್ -55ಇ ವಿಷಯಕ್ಕೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಲಾಗುತ್ತಿಲ್ಲ. **ಒಂದುವೇಳೆ ಯಾವುದೇ ವಿದ್ಯಾರ್ಥಿಯು 55-ಇ ವಿಷಯಕ್ಕೆ ಪರೀಕ್ಷೆ ತೆಗೆದುಕೊಳ್ಳಲು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ್ದಲ್ಲಿ ಅದನ್ನು ರದ್ದುಗೊಳಿಸಿ ಭಾಷಾ ನೀತಿಯಂತೆ ಪ್ರವೇಶ ಪತ್ರ ನೀಡಲಾಗುವುದು ಹಾಗೂ ಸಂಬಂಧಿಸಿದ ಶಾಲಾ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.**

13. ಕ್ಲಸ್ಟರ್ ಪರೀಕ್ಷಾ ಕೇಂದ್ರಗಳ ವಿಧಾನವು ಈ ವರ್ಷವೂ ಮುಂದುವರಿಯಲಿದೆ:

14. **ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳ ನೋಂದಣಿ:**

ಕೇಂದ್ರ ಪಠ್ಯಕ್ರಮ (ಸಿಬಿಎಸ್‌ಇ/ಐಸಿಎಸ್‌ಇ) ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ರೂ. 1,000/+ 10-00 : ಒಟ್ಟು ರೂ. 1010/-ಗಳನ್ನು ಸಲ್ಲಿಸಿ ರಾಜ್ಯ ಪಠ್ಯಕ್ರಮಕ್ಕೆ ನೋಂದಾಯಿಸಿಕೊಳ್ಳುವುದು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿರುತ್ತದೆ. ಈ ರೀತಿ ನೋಂದಾಯಿಸದೆ ರಾಜ್ಯ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ತಿರಸ್ಕರಿಸಲಾಗುವುದು. ಪರೀಕ್ಷಾ ಅರ್ಜಿಯೊಂದಿಗೆ ಪಠ್ಯಕ್ರಮ ಬದಲಾವಣೆ ಆದೇಶದ ಪ್ರತಿಯನ್ನು ಸಲ್ಲಿಸುವುದು. ವಲಸೆ ಬಂದ ಎಲ್ಲಾ ವಿದ್ಯಾರ್ಥಿಗಳು ರಾಜ್ಯ ಪಠ್ಯ ಕ್ರಮದಂತೆ ಭಾಷಾ ಸಂಯೋಜನೆ ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿಯನ್ನು **ಅನುಬಂಧ-6** ರಲ್ಲಿ ನಮೂದಿಸುವುದು. ವಲಸೆ ವಿದ್ಯಾರ್ಥಿಗಳಿಂದ ವಸೂಲಾದ ನೋಂದಣಿ ಶುಲ್ಕವನ್ನು ಜಿಲ್ಲಾ ಉಪ ನಿರ್ದೇಶಕರು ಕ್ರೋಢೀಕರಿಸಿ **ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ, ಬೆಂಗಳೂರು** ಈ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಹುಂಡಿ ಖರೀದಿಸಿ ದಿನಾಂಕ: 28-08-2010ರೊಳಗಾಗಿ ಮಂಡಳಿಗೆ ಸಲ್ಲಿಸುವುದು.

15. **ಮಕ್ಕಳ ಹಾಜರಾತಿ:**

ಮಂಡಳಿಯ ಕಾಯ್ದೆ 1966 ನಿಯಮ 37ರನ್ವಯ, ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಿದ ದಿನಗಳಿಗೆ ಅನುಸಾರ ಕನಿಷ್ಠ ಶೇ. 75ರಷ್ಟು ಹಾಜರಾತಿ ಕಡ್ಡಾಯ. 15 ದಿನಗಳವರೆಗೆ ವಿನಾಯಿತಿ ನೀಡಲು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರುಗಳು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. 15 ದಿನಗಳಿಗೂ ಮೇಲ್ಪಟ್ಟು 30 ದಿನಗಳವರೆಗೆ ವಿನಾಯಿತಿ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ. 30ಕ್ಕೂ ಹೆಚ್ಚು ದಿನಗಳ ಹಾಜರಾತಿ ಕೊರತೆ ಇದ್ದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

**16. ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ.**

ಮಂಡಳಿಯ ಕಾಯ್ದೆ ಅನುಬಂಧ–3ರ ನಿಯಮ 22ರನ್ವಯ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಒಂದೇ ಪ್ರಯತ್ನದಲ್ಲಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾದಲ್ಲಿ ಮಾತ್ರ ತೇರ್ಗಡೆಯಾದ 02 ವರ್ಷಗಳ ಅವಧಿಯಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ. ಮರು ಪ್ರಯತ್ನದಲ್ಲಿ ತೇರ್ಗಡೆಯಾದ ಹಾಗೂ ಇತರೆ ಸಮಾನಾಂತರ ಪರೀಕ್ಷೆ / ಎಸ್.ಎಸ್.ಎಲ್.ಸಿ.ಗಿಂತ ಉನ್ನತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಲ್ಲಿ ಅಂಥಹ ವಿದ್ಯಾರ್ಥಿಗಳು ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ. ಈ ಅವಕಾಶವು ಒಂದು ಪ್ರಯತ್ನಕ್ಕೆ ಮಾತ್ರ ಸೀಮಿತಗೊಂಡಿರುತ್ತದೆ.

(ಎ) **ಅನುಸರಿಸಬೇಕಾದ ಕ್ರಮಗಳು**:

- ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಮುಖ್ಯೋಪಾಧ್ಯಾಯರ ಮುಖಾಂತರ ಮಂಡಳಿಗೆ ನಿಗದಿತ ಶುಲ್ಕದೊಂದಿಗೆ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು
- .ಮಂಡಳಿಯಿಂದ ಅನುಮತಿ ಪಡೆದನಂತರ ಪರೀಕ್ಷಾ ಶುಲ್ಕ ಪಾವತಿಸಬೇಕು.
- ಹಿಂದೆ ವ್ಯಾಸಂಗ ಮಾಡಿದ ಶಾಲೆಯಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಆ ಶಾಲೆಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.
- ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

**17. ಅರ್ಜಿಗಳನ್ನು ಸಲ್ಲಿಸಲು ಪಾಲಿಸಬೇಕಾದ ಸೂಚನೆಗಳು.**

- ಎಲ್ಲಾ ಅಭ್ಯರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾದ ನಾಮ ಪಟ್ಟಿಗಳನ್ನು ಸಿದ್ದಪಡಿಸಬೇಕು.
- ಪುನರಾವರ್ತಿತ/ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳಿಗೆ ಎಂ.ಎಸ್.ಎ.ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಎಂ.ಎಸ್.ಎ. ಲಭ್ಯವಿಲ್ಲದಿದ್ದಲ್ಲಿ, 50 ರೂ.ಗಳ ಶುಲ್ಕವನ್ನು ಸಕ್ಷಮ ಪ್ರಾಧಿಕಾರದ

ವಿಭಾಗೀಯ ಪ್ರಾದೇಶಿಕ ಮಂಡಳಿಗಳಿಗೆ ಪಾವತಿಸಿ ಎಂ.ಎಸ್.ಎ ಪ್ರತಿಯನ್ನು ಪಡೆದು ಸಲ್ಲಿಸುವುದು ಕಡ್ಡಾಯ.

- ಇತ್ತೀಚಿನ ಪಾಸ್‌ಪೋರ್ಟ್ ಬಹುವರ್ಣದ (ಕಲರ್ ಫೋಟೋ) ಭಾವಚಿತ್ರದೊಂದಿಗೆ ಸಲ್ಲಿಸುವುದು ಕಡ್ಡಾಯ. ಕೇವಲ ಶುಲ್ಕವನ್ನು ವಸೂಲಿ ಮಾಡಿ ಭಾವಚಿತ್ರ ರಹಿತವಾಗಿ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಂದ ಫೋಟೋ ಮತ್ತು ಶುಲ್ಕಗಳನ್ನು ಏಕ ಕಾಲದಲ್ಲಿ ಸ್ವೀಕರಿಸಲು ಕ್ರಮ ಕೈಗೊಳ್ಳತಕ್ಕದ್ದು.
- ದಿನಾಂಕ: 01-06-2011ರಂದು 15 ವರ್ಷ ವಯೋಮಿತಿ ಪೂರೈಸುವ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇವರುಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರವರಲ್ಲಿ ನಿಗದಿತ ನೋಂದಣಿ ಶುಲ್ಕ ನೀಡಿ ನೋಂದಣಿ ಮಾಡಿಸಿಕೊಂಡಿರಬೇಕು.
- ಶಾಲಾ ಅಭ್ಯರ್ಥಿ/ಖಾಸಗಿ ಹೊಸ/ರೆಗ್ಯುಲರ್ ಪುನರಾವರ್ತಿತ/ಖಾಸಗಿ ಪುನರಾವರ್ತಿತ ಅಭ್ಯಥಿಗಳ ನಾಮಪಟ್ಟಿಯನ್ನು (ಅನುಬಂಧ-1 ರಿಂದ ಅನುಬಂಧ-4ರ ನಮೂನೆಗಳಂತೆ) ಸ್ವೀಕರಿಸಲು ದಿನಾಂಕ: 28-08-2010 ಕೊನೆಯ ದಿನಾಂಕವಾಗಿರುತ್ತದೆ. ಈ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪರೀಕ್ಷಾ ಶುಲ್ಕದ ಹುಂಡಿಯನ್ನು ನಿಗದಿತ ಅವಧಿಯಲ್ಲಿ ಖರೀದಿಸಿದ್ದರೂ, ಅರ್ಜಿಗಳನ್ನು ಕೊನೆಯ ದಿನಾಂಕದ ನಂತರ ಸಲ್ಲಿಸಲು ಖಂಡಿತಾ ಅವಕಾಶವಿಲ್ಲ. ಅರ್ಜಿಗಳು ಮತ್ತು ಪರೀಕ್ಷಾ ಶುಲ್ಕದ ಹುಂಡಿ ಎರಡನ್ನೂ ದಿನಾಂಕ: **28-08-2010** ಸಂಜೆ **5-30**ರೊಳಗೆ ಬೆಂಗಳೂರಿನ ಮಂಡಳಿಯ ಕೇಂದ್ರ ಕಚೇರಿಗೆ ಸಲ್ಲಿಸಬೇಕು.
- ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ.ಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು.
    1. ಜುಲೈ 2002ರ ಮತ್ತು ಹಿಂದಿನ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ.ಗಳು.
    2. ಏಪ್ರಿಲ್-2003ರ ಮತ್ತು ನಂತರದ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ.ಗಳು
- ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯ ಜೊತೆಗೆ ನೋಂದಣಿ ಪ್ರಮಾಣ ಪತ್ರವನ್ನೂ ಸಹ ಸಲ್ಲಿಸಬೇಕು. ಸಕಾರಣದಿಂದ ತಿರಸ್ಕರಿಸುವ ಅರ್ಜಿಗಳ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. ಶುಲ್ಕ ವಿನಾಯಿತಿ ಪಡೆಯುವ ಖಾಸಗಿ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ(ಟಿ.ಸಿ.)ವನ್ನು ಸಲ್ಲಿಸತಕ್ಕದ್ದು.(ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1)
- ಅಭ್ಯರ್ಥಿಗಳ ಮೂರು ಬಹುವರ್ಣದ ಇತ್ತೀಚಿನ ಭಾವಚಿತ್ರಗಳನ್ನು ಶಾಲಾ ಮುಖ್ಯಸ್ಥರು ಸಂಗ್ರಹಿಸಿ, ಎರಡು ಭಾವಚಿತ್ರಗಳನ್ನು ಮಂಡಳಿಯಿಂದ ಬರುವ ಓ.ಎಂ.ಆರ್ ಫಾರಂನಲ್ಲಿ ಭಾವಚಿತ್ರಕ್ಕಾಗಿ ನಿಗದಿಪಡಿಸಿರುವ ಜಾಗದಲ್ಲಿ ಅಂಟಿಸಿ **ಒಂದು ಭಾವಚಿತ್ರದ ಮೇಲೆ ಮಾತ್ರ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ನಮೂದಿಸಬೇಕು**. ಮತ್ತೊಂದು ಭಾವಚಿತ್ರವನ್ನು ಶಾಲೆಯ ಆಲ್ಬಂನಲ್ಲಿ ಸಂಗ್ರಹಿಸಿಡಬೇಕು. ಭಾವಚಿತ್ರಗಳನ್ನು ಅಂಟಿಸಲು ಬಳಸುವ ಗಮ್ ಉತ್ತಮ ಗುಣಮಟ್ಟದಿಂದಿರಬೇಕು. ಭಾವಚಿತ್ರದ ನಾಲ್ಕು ತುದಿಗಳು ಭದ್ರವಾಗಿ ಅಂಟುಕೊಂಡಿರಬೇಕು. **ಸ್ಟೇಪಲ್ ಬಳಸಬಾರದು**.
- **ಭಾವಚಿತ್ರ ರಹಿತ ಓ.ಎಂ.ಆರ್/ ಎಂ.ಎಸ್.ಎ.ಗಳನ್ನು ಯಾವುದೇ ಕಾರಣದಿಂದ ಪುರಸ್ಕರಿಸುವುದಿಲ್ಲ**.
- ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ ಅರ್ಜಿಗಳಲ್ಲಿ ನಿಗದಿತ ಸ್ಥಳದಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಸಹಿ ಪಡೆಯಬೇಕು. **ಯಾವ ಕಾರಣಕ್ಕು ಭಾವಚಿತ್ರಗಳ ಮೇಲೆ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ಹಾಕತಕ್ಕದ್ದಲ್ಲ**.

- ಬೇಡಿಕೆಯಂತೆ ಮಂಡಳಿಯಿಂದ ಪಡೆದ ಎಲ್ಲಾ ಓ.ಎಂ.ಆರ್ ಅರ್ಜಿಗಳನ್ನು ಪೂರ್ಣವಾಗಿ ಹಿಂದಿರುಗಿಸಬೇಕು. ಗೈರು ಹಾಜರಿಯಾದ ವಿದ್ಯಾರ್ಥಿಗಳಿದ್ದಲ್ಲಿ, ಮಧ್ಯದಲ್ಲಿ ಶಾಲೆ ಬಿಟ್ಟುಹೋದ ಅಭ್ಯರ್ಥಿಗಳಿದ್ದಲ್ಲಿ ಅಂಥಹವರುಗಳ ವಿವರಗಳನ್ನು ಓ.ಎಂ.ಆರ್‌ನಲ್ಲಿ ನಮೂದಿಸಿ ದೃಢೀಕರಿಸಬೇಕು. **ಯಾವುದೇ ಕಾರಣದಿಂದ ಓ.ಎಂ.ಆರ್.ಗಳನ್ನು ಶಾಲೆಗಳಲ್ಲಿ ಇಟ್ಟುಕೊಳ್ಳುವಂತಿಲ್ಲ. ಬಾಕಿ ಉಳಿದ ಒ.ಎಂ.ಆರ್ ಅರ್ಜಿಗಳನ್ನು ಮಂಡಳಿಗೆ ಹಿಂದಿರುಗಿಸುವುದು ಕಡ್ಡಾಯ.**

**ಮಾರ್ಚ್-2011ರ ಎಸ್.ಎಸ್.ಎಲ್.ಸಿ. ಪರೀಕ್ಷಾ ಅರ್ಜಿಗಳನ್ನು ಈ ಕೆಳಗಿನ ಅಧಿಕಾರಿಗಳಿಗೆ ದಿನಾಂಕ: 28-08-2010 ರೊಳಗಾಗಿ ತಲುಪಿಸಬೇಕು.**

| ಕ್ರ ಸಂ. | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ |
|---|---|---|---|
| 1 | ಎಫ್ | ರತ್ನಮ್ಮ | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ |
| 2 | ಜಿ | ಉಷಾ ಎಂ.ಡಿ. | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ |
| 3 | ಹೆಚ್ | ಭೀಮಸೇನರಾವ್ ಹೆಚ್ | ಚಿತ್ರದುರ್ಗ/ದಾವಣಗೆರೆ/ಬೆಂಗಳೂರು ಗ್ರಾಮಾಂತರ/ರಾಮನಗರ |
| 4 | ಐ | ಭೀಮೇಗೌಡ. ಕೆ. | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ |
| 5 | ಜೆ | ಸೋಮೇಗೌಡ | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು |
| 6 | ಕೆ | ಲೋಕಯ್ಯ ಎಂ | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ |
| 7 | ಎಲ್ | ಭಾಗ್ಯವತಮ್ಮ | ಧಾರವಾಡ/ ಚಿಕ್ಕೋಡಿ/ ಬೆಳಗಾವಿ |
| 8 | ಎಂ | ಭೂದೇವಿ | ಮಂಗಳೂರು/ ಉಡುಪಿ/ ಕಾರವಾರ/ ರಾಯಚೂರು |
| 9 | ಎನ್ | ನಾರಾಯಣಪ್ಪ | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ |

**(ಎಂ.ಎನ್.ಬೇಗ್)**
**ನಿರ್ದೇಶಕರು (ಪರೀಕ್ಷೆಗಳು)**

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅಂಗೀಕೃತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ)
2. ಹೆಚ್ಚುವರಿ ಆಯುಕ್ತರು, ಧಾರವಾಡ/ಗುಲ್ಬರ್ಗಾ. (ಪರಿಶೀಲನಾ ಶಾಖೆಗಳ ಮೂಲಕ)
3. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ (ಪರಿಶೀಲನಾ ಶಾಖೆಗಳ ಮೂಲಕ)
4. .ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,ಇವರ ಮಾಹಿತಿಗಾಗಿ ಹಾಗೂ ಖಾಸಗಿ ಅಭ್ಯರ್ಥಿಗಳನ್ನು ಮತ್ತು ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳನ್ನು ಈ ಹಿಂದಿನ ವರ್ಷದಂತೆ ಶುಲ್ಕ ಪಡೆದು, ನೋಂದಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ನಮೂನೆ 6 ಮತ್ತು 7 ನ್ನು ಭರ್ತಿ ಮಾಡಿ ಮಂಡಳಿಗೆ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ

ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)

5. .ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)
6. ಮಂಡಳಿಯಲ್ಲಿನ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
7. ನಿರ್ದೇಶಕರು/ಕಾರ್ಯದರ್ಶಿಗಳ ಆಪ್ತಶಾಖೆಗೆ ಮಾಹಿತಿಗಾಗಿ
8. ಕಛೇರಿ ಪ್ರತಿ.

**<u>ಅನುಬಂಧ – ಅ</u>**

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

**<u>ಮಾರ್ಚ್–2011ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಭಾಷಾ ಸಂಯೋಜನೆ</u>**

| | | |
|---|---|---|
| 01 | 31 | 61 |
| | | |
| 01 | 31 | 64 |
| 01 | 31 | 65 |
| 01 | 31 | 67 |

| | | |
|---|---|---|
| 04 | 31 | 62 |
| 04 | 33 | 61 |
| 04 | 33 | 63 |
| 04 | 33 | 64 |
| 04 | 33 | 65 |
| 04 | 33 | 67 |

| | | |
|---|---|---|
| 06 | 31 | 62 |
| 06 | 33 | 63 |
| 06 | 33 | 64 |
| 06 | 33 | 65 |
| 06 | 33 | 67 |

| | | |
|---|---|---|
| 08 | 31 | 62 |
| 08 | 33 | 61 |
| 08 | 33 | 63 |
| 08 | 33 | 64 |
| 08 | 33 | 65 |
| 08 | 33 | 67 |

| | | |
|---|---|---|
| 10 | 31 | 62 |
| 10 | 33 | 61 |
| 10 | 33 | 63 |
| 10 | 33 | 64 |
| 10 | 33 | 65 |
| 10 | 33 | 67 |

| | | |
|---|---|---|
| 12 | 31 | 62 |
| 12 | 33 | 61 |
| 12 | 33 | 63 |
| 12 | 33 | 64 |
| 12 | 33 | 65 |
| 12 | 33 | 67 |

| | | |
|---|---|---|
| 14 | 33 | 61 |
| 14 | 33 | 64 |
| 14 | 33 | 65 |
| 14 | 33 | 67 |

| | | |
|---|---|---|
| 16 | 31 | 62 |
| 16 | 33 | 61 |
| 16 | 33 | 63 |
| 16 | 33 | 64 |
| 16 | 33 | 65 |

**ಒಟ್ಟು 43 ಭಾಷಾ ಸಂಯೋಜನೆಗಳು**

| ಅಂಧ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) (ತ್ರಿ ಭಾಷೆಗಳು ಕಡ್ಡಾಯ) | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 93 | 85 |
| 92 | 94 | 85 |
| 93 | 94 | 85 |

| ಕಲಿಕಾ ನ್ಯೂನತೆ ಹೊಂದಿದ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 93 | 85 |
| 92 | 94 | 85 |
| 93 | 94 | 85 |

ಸರ್ಕಾರದ ಆದೇಶ ಸಂಖ್ಯೆ: ಮ.ಮ.ಅ:65:ಪಿಹೆಚ್‌ಪಿ:2000 ದಿನಾಂಕ:10.03.2000ದ ಅನ್ವಯ **ಕಿವುಡ ಮತ್ತು ಮೂಕ** ಹಾಗೂ **ಕಲಿಕಾ ನ್ಯೂನತೆ ಹೊಂದಿದ** ವಿದ್ಯಾರ್ಥಿಗಳಿಗೆ: **ಶಿಕ್ಷಣ ಮಾಧ್ಯಮದ ಒಂದು ಭಾಷೆ ಹೊರತು ಪಡಿಸಿ ಉಳಿದ ಎರಡು ಭಾಷೆಗಳ ಕಲಿಕೆಯಿಂದ ವಿನಾಯಿತಿ ಇದೆ.**

**<u>ವಿಷಯ ಸಂಕೇತ ಸೂಚಿ</u>**:

01/33/62–**ಕನ್ನಡ,** 14/31/63–**ಇಂಗ್ಲೀಷ್,** 16/67–**ಸಂಸ್ಕೃತ,** 04–**ತೆಲುಗು,** 08–**ಮರಾಠಿ,** 10–**ತಮಿಳು,** 61/06–**ಹಿಂದಿ,** 12–**ಉರ್ದು,** 64–**ಅರೇಬಿಕ್,** 65–**ಪರ್ಷಿಯನ್,** 91–**ಭಾ.ಸ.ಶಾಸ್ತ್ರ,** 92–**ಭಾ.ಅ.ಶಾಸ್ತ್ರ,** 93–**ಭಾ.ರಾ ಮತ್ತು ಪೌ.ನೀತಿ,** 94–**ಸಂಗೀತ**

## <u>ಅನುಬಂಧ–1</u>

## <u>(ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಶಾಲಾ ವಿದ್ಯಾರ್ಥಿಗಳಿಗಾಗಿ)</u>

## <u>(REGULAR FRESH CANDIDATES ) (R.F)</u>

**ಶಾಲೆಯ ಹೆಸರು** :__________________________ **ಶಾಲೆಯ ಸಂಕೇತ** _____

:__________________________

:__________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇಷನ್ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ | ರಾಜ್ಯ ಪಠ್ಯ ಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಯೇ |
|---|---|---|---|---|---|---|---|---|---|
| | | B | G | | | | | | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

**<u>ವಿಶೇಷ ಸೂಚನೆ:</u>** ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಬಗ್ಗೆ ಶುಲ್ಕ ವಿನಾಯಿತಿ ಎಂದು ಕೆಂಪು ಶಾಯಿಯಲ್ಲಿ ತಪ್ಪದೇ ಷರಾ ಬರೆಯಬೇಕು.

**ವಲಸೆ ಬಂದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಾಲಂ 10 ರಲ್ಲಿ ಹೌದು ಎಂದು ಇಲ್ಲ ಎಂದು ನಮೂದಿಸುವುದು.**

**ಹೌದಾದಲ್ಲಿ ರಾಜ್ಯ ಪಠ್ಯಕ್ರಮಕ್ಕೆ ಅನುಮತಿಸಲಾದ ಜಿಲ್ಲಾ ಉ.ನಿ.ಕರು ನೀಡಿದ ಆದೇಶದ ಪ್ರತಿ ಲಗತ್ತಿಸುವುದು.**

**<u>ಜಾತಿ ಸಂಕೇತ:</u>** 1. ಪರಿಶಿಷ್ಟ ಜಾತಿ : 01 2. ಪರಿಶಿಷ್ಟ ಪಂಗಡ : 02 3. ಪ್ರವರ್ಗ–1: 03 4. ಸಾಮಾನ್ಯ : 04 5. ಆರ್ಥಿಕವಾಗಿ ಹಿಂದುಳಿದವರು : 05

**ಘೋಷ್ವಾರೆ**

| ಕ್ರಸಂ | ವಿವರ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | ಪರಿಶಿಷ್ಟ ಜಾತಿ | | | |
| 2 | ಪರಿಶಿಷ್ಟ ಪಂಗಡ | | | |
| 3 | ಪ್ರವರ್ಗ–1 | | | |
| 4 | ಸರ್ಕಾರಿ ಶಾಲೆಗಳಾದಲ್ಲಿ ವ್ಯಾಸಂಗ | ----- | | |

| | | | | |
|---|---|---|---|---|
| | ಮಾಡುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ (ಕ್ರ.ಸಂ. 1,2,3 ರಲ್ಲಿರುವವರನ್ನು ಹೊರತು ಪಡಿಸಿ) | | | |
| 5 | ಶುಲ್ಕ ನೀಡಿರುವವರ ಸಂಖ್ಯೆ | | | |
| 6 | ಒಟ್ಟು | | | |

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## <u>ಅನುಬಂಧ-2</u>

## <u>(ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಖಾಸಗಿ ವಿದ್ಯಾರ್ಥಿಗಳಿಗಾಗಿ)</u>

## <u>( PRIVATE FRESH CANDIDATES) (P.F)</u>

**ಶಾಲೆಯ ಹೆಸರು** :______________________
:______________________
:______________________

**ಶಾಲೆಯ ಸಂಕೇತ** :________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇಷನ್ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. |
|---|---|---|---|---|---|---|---|---|
| | | B | G | | | | | |
| 1 | 2 | 3 | | 4 | 5 | 6 | 7 | 8 |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

**<u>ವಿಶೇಷ ಸೂಚನೆ:</u>** ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಬಗ್ಗೆ ಶುಲ್ಕ ವಿನಾಯಿತಿ ಎಂದು ಕೆಂಪು ಶಾಯಿಯಲ್ಲಿ ತಪ್ಪದೇ ಷರಾ ಬರೆಯಬೇಕು.

**<u>ಜಾತಿ ಸಂಕೇತ:</u>** 1. ಪರಿಶಿಷ್ಟ ಜಾತಿ : 01, 2. ಪರಿಶಿಷ್ಟ ಪಂಗಡ : 02,
3. ಪ್ರವರ್ಗ-1: 03, 4. ಸಾಮಾನ್ಯ : 04

### <u>ಘೋಷ್ವಾರೆ</u>

| ಕ್ರ ಸಂ | ವಿವರ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | ಪರಿಶಿಷ್ಟ ಜಾತಿ | | | |
| 2 | ಪರಿಶಿಷ್ಟ ಪಂಗಡ | | | |

| | | | | |
|---|---|---|---|---|
| 3 | ಪ್ರವರ್ಗ–1 | | | |
| 4 | ಶುಲ್ಕ ನೀಡಿರುವವರ ಸಂಖ್ಯೆ | | | |
| 5 | ಒಟ್ಟು | | | |

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–3

## (ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳಗಾಗಿ)

# REGULAR REPEATER (RR)

ಶಾಲೆಯ ಹೆಸರು :____________________
:____________________
:____________________

ಶಾಲೆಯ ಸಂಕೇತ:________

| ಕ್ರ ಸಂ | ಪುರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ ಲಗತ್ತಿಸ ಲಾಗಿದೆಯೇ | ಈಗ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿಷಯಗಳ ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| 1 | 2 | 3 | 4 | 5 | 6 |
| | | | | | |
| | | | | | |

ಘೋಷ್ವಾರೆ

| ಕ್ರ ಸಂ | ವಿವರ | ಬಾಲಕರು | | ಬಾಲಕಿಯರು | | ಒಟ್ಟು | |
|---|---|---|---|---|---|---|---|
| | | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್–2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಏಪ್ರಿಲ್–2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಬಾಲಕರು | ಬಾಲಕಿಯರು |
| 1 | ಪರಿಶಿಷ್ಟ ಜಾತಿ | | | | | | |
| 2 | ಪರಿಶಿಷ್ಟ ಪಂಗಡ | | | | | | |
| 3 | ಪ್ರವರ್ಗ–1 | | | | | | |
| 4 | ಶುಲ್ಕ ನೀಡಿರುವವರ ಸಂಖ್ಯೆ | | | | | | |
| 5 | ಒಟ್ಟು | | | | | | |

**ವಿಶೇಷ ಸೂಚನೆ:**

**1. ಎಂ.ಎಸ್.ಎ ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.**

**2. ಭಾವಚಿತ್ರ ರಹಿತ ಎಂ.ಎಸ್.ಎ / ಓ.ಎಂ.ಆರ್ ಗಳನ್ನು ತಿರಸ್ಕರಿಸಲಾಗುವುದು.**

**3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.**

ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ-4

## (ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ)

# PRIVATE REPEATER (PR)

ಶಾಲೆಯ ಹೆಸರು :____________________

:____________________

:____________________

ಶಾಲೆಯ ಸಂಕೇತ:________

| ಕ್ರ ಸಂ | ಪುರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ ಲಗತ್ತಿಸಲಾಗಿದೆಯೇ | ಈಗ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿಷಯಗಳು ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| 1 | 2 | 3 | 4 | 5 | 6 |
| | | | | | |
| | | | | | |

**ಘೋಷ್ವಾರೆ**

| ಕ್ರ ಸಂ | ವಿವರ | ಬಾಲಕರು | | ಬಾಲಕಿಯರು | | ಒಟ್ಟು | |
|---|---|---|---|---|---|---|---|
| | | ಜುಲೈ-2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್-2003 ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಜುಲೈ-2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಏಪ್ರಿಲ್-2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಬಾಲಕರು | ಬಾಲಕಿಯರು |
| 1 | ಪರಿಶಿಷ್ಟ ಜಾತಿ | | | | | | |
| 2 | ಪರಿಶಿಷ್ಟ ಪಂಗಡ | | | | | | |
| 3 | ಪ್ರವರ್ಗ-1 | | | | | | |
| 4 | ಶುಲ್ಕ ನೀಡಿರುವವರ ಸಂಖ್ಯೆ | | | | | | |
| 5 | ಒಟ್ಟು | | | | | | |

**ವಿಶೇಷ ಸೂಚನೆ:**

**1. ಎಂ.ಎಸ್.ಎ ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.**

**2. ಭಾವಚಿತ್ರ ರಹಿತ ಎಂ.ಎಸ್.ಎ / ಓ.ಎಂ.ಆರ್ ಗಳನ್ನು ತಿರಸ್ಕರಿಸಲಾಗುವುದು.**
**3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.**
ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ-5

## ಅನುಬಂಧವಾರು ಪರೀಕ್ಷಾ ಶುಲ್ಕದ ವಿವರಗಳ ಘೋಷ್ವಾರೆ

ಶಾಲೆಯ ಹೆಸರು :____________________ ಶಾಲೆಯ ಸಂಕೇತ______
:____________________
:____________________

| ಕ್ರ.ಸಂ. | ಅನುಬಂಧದ ಸಂಖ್ಯೆ | ಪರೀಕ್ಷಾ ಶುಲ್ಕ ವಿನಾಯಿತಿ ಪಡೆದವರ ಸಂಖ್ಯೆ | ಪರೀಕ್ಷಾ ಶುಲ್ಕ ಪವಾತಿಸಿರುವವರ ಸಂಖ್ಯೆ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇಷನ್ ಶುಲ್ಕದ ಮೊತ್ತ | ಒಟ್ಟು ವಸೂಲಾದ ಶುಲ್ಕದ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಅನುಬಂಧ-1 | | | | | |
| 2 | ಅನುಬಂಧ-2 | | | | | |
| 3 | ಅನುಬಂಧ-3 | | | | | |
| 4 | ಅನುಬಂಧ-4 | | | | | |
| | ಒಟ್ಟು | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ ________________________________________

## ಪರೀಕ್ಷಾ ಮಂಡಳಿಗೆ ಪಾವತಿಸಲಾದ ಶುಲ್ಕದ ವಿವರ

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಹುಂಡಿ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |

| | | | | | |
|---|---|---|---|---|---|
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ _______________________________________

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ-6

## ಕೇಂದ್ರ ಪಠ್ಯ ಕ್ರಮ ಮತ್ತು ಹೊರರಾಜ್ಯ ಪಠ್ಯಕ್ರಮದಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮುಂದುವರೆಸಲು ಅನುಮತಿಸಲಾದ ವಿದ್ಯಾರ್ಥಿಗಳ ಮಾಹಿತಿಯ ವಿವರ

**ಜಿಲ್ಲೆಯ ಹೆಸರು** :________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ನೋಂದಣಿ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. | ಷರಾ |
|---|---|---|---|---|---|---|---|---|
| | | B | G | | | | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | **ಒಟ್ಟು** | | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ ___________________________________..

## ಪರೀಕ್ಷಾ ಮಂಡಳಿಗೆ ಪಾವತಿಸಲಾದ ನೋಂದಣಿ ಶುಲ್ಕದ ವಿವರ

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಹುಂಡಿ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ _______________________________________

ಜಿಲ್ಲಾ ಉಪನಿರ್ದೇಶಕರ ಸಹಿ
ಕಛೇರಿಯ ಮೊಹರಿನೊಂದಿಗೆ

## ಅನುಬಂಧ–7

## 2010–11 ಸಾಲಿಗೆ ನಡೆಯಲಿರುವ ಮಾರ್ಚ್–2011ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಖಾಸಗಿಯಾಗಿ ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿಕೊಂಡ ವಿದ್ಯಾರ್ಥಿಗಳ ಮಾಹಿತಿಯ ವಿವರ

**ಜಿಲ್ಲೆಯ ಹೆಸರು** :________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ನೋಂದಣಿ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. | ಷರಾ |
|---|---|---|---|---|---|---|---|---|
| | | B | G | | | | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | **ಒಟ್ಟು** | | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ ___________________________________..

## ಪರೀಕ್ಷಾ ಮಂಡಳಿಗೆ ಪಾವತಿಸಲಾದ ನೋಂದಣಿ ಶುಲ್ಕದ ವಿವರ

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಹುಂಡಿ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ _______________________________________

ಜಿಲ್ಲಾ ಉಪನಿರ್ದೇಶಕರ ಸಹಿ
ಕಛೇರಿಯ ಮೊಹರಿನೊಂದಿಗೆ

ಎ8–ಎಸ್‌ಎಸ್‌ಎಲ್‌ಸಿ–ಅಧಿಸೂಚನೆ–ಮಾರ್ಚ್ 2011/2010–11 23–08–2010

## ಜ್ಞಾಪನ

ವಿಷಯ:–ಮಾರ್ಚ್ 2011ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಪುನರಾವರ್ತಿತ/ಖಾಸಗಿ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆ ದಿನಾಂಕ ವಿಸ್ತರಿಸಿರುವ ಬಗ್ಗೆ

ಉಲ್ಲೇಖ:–ಈ ಕಛೇರಿ ಅಧಿಸೂಚನೆ ಸಮಸಂಖ್ಯೆ ದಿನಾಂಕ 01–06–2010

~~~~~

2011ರ ಮಾರ್ಚ್ ಮಾಹೆಯಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ಪುನರಾವರ್ತಿತ ಅಭ್ಯರ್ಥಿಗಳು/ಖಾಸಗಿ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ಶಾಲೆಯಲ್ಲಿ ಸ್ವೀಕರಿಸಲು ದಂಡ ರೂ.500/– ಮತ್ತು ಪರೀಕ್ಷಾ ಶುಲ್ಕದೊಂದಿಗೆ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಿದೆ.

1) ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ – 28–08–2010

2) ಪುನರಾವರ್ತಿತ/ಖಾಸಗಿ ಅಭ್ಯರ್ಥಿಗಳಿಂದ ಶಾಲೆಯಲ್ಲಿ ದಂಡ ರೂ.500/– ಮತ್ತು ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆಯ ದಿನಾಂಕ – 28–08–2010

3) ಶಾಲೆಯ ಮುಖ್ಯಸ್ಥರು ಪರೀಕ್ಷಾ ಶುಲ್ಕದ ಹುಂಡಿ ಪಡೆಯಲು ಕೊನೆಯ ದಿನಾಂಕ – 30–08–2010

4) ಅರ್ಜಿ ಹಾಗೂ ಹುಂಡಿಗಳನ್ನು ಮಂಡಳಿಗೆ ತಲುಪಿಸುವ ಕೊನೆ ದಿನಾಂಕ – 03–09–2010

ಉಳಿದಂತೆ ಈ ಕಛೇರಿ ಅಧಿಸೂಚನೆ ಸಮಸಂಖ್ಯೆ ದಿನಾಂಕ 01–06–2010ರಲ್ಲಿನ ಸೂಚನೆಗಳನ್ನು ಪಾಲಿಸಲು ತಿಳಿಸಿದೆ.

(ಎಂ.ಎನ್. ಬೇಗ್)
ನಿರ್ದೇಶಕರು(ಪರೀಕ್ಷೆಗಳು)

ಇವರಿಗೆ:–

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಮುಖ್ಯಸ್ಥರಿಗೆ ತಿಳಿಸಲು ಸೂಚಿಸಿದೆ.
~~~~~